


بسم اللهِ الرّحمٰنِ الرّحيم

# ಮಸೀಹ್ ಮೌಊದ್ ದಿನ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **24-03-2023** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ.

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ- بِسْمِ اللّٰهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعٰلَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. إِيَّاكَ نَعْبُدُ وَإِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಸೂರಃ ಜುಮುಅದ ಕೆಳಗಿನ ಈ ವಚನ ತಿಲಾವತ್ ಮಾಡಿದರು:)*

هُوَ الَّذِيْ بَعَثَ فِي الْاُمِّيّٖنَ رَسُوْلًا مِّنْهُمْ يَتْلُوْا عَلَيْهِمْ اٰيٰتِهٖ وَيُزَكِّيْهِمْ وَيُعَلِّمُهُمُ الْكِتٰبَ وَالْحِكْمَةَ ۗ وَاِنْ كَانُوْا مِنْ قَبْلُ لَفِيْ ضَلٰلٍ مُّبِيْنٍ ۝ وَّاٰخَرِيْنَ مِنْهُمْ لَمَّا يَلْحَقُوْا بِهِمْ ۗ وَهُوَ الْعَزِيْزُ الْحَكِيْمُ ۝

ಈ ವಚನಗಳ ಅರ್ಥ ಹೀಗಿದೆ: ಅನಕ್ಷರಸ್ಥ ಜನರಲ್ಲಿ, ಅವರಿಂದಲೇ ಒಬ್ಬ ಸಂದೇಶವಾಹಕನನ್ನು ನಿಯುಕ್ತಿಗೊಳಿಸಿದವನು ಅವನೇ. ಆ ಸಂದೇಶವಾಹಕ ಅಲ್ಲಾಹನ ವಚನಗಳನ್ನು ಅವರಿಗೆ ವಾಚಿಸುತ್ತಾರೆ; ಅವರನ್ನು ಶುದ್ಧೀಕರಿಸುತ್ತಾರೆ ಹಾಗೂ ಅವರಿಗೆ ಗ್ರಂಥವನ್ನೂ ಜ್ಞಾನವನ್ನೂ ಕಲಿಸುತ್ತಾರೆ. ಮುಂಚೆಯಾದರೋ ಆ ಜನರು ಸ್ಪಷ್ಟವಾದ ತಪ್ಪು ಹಾದಿಯಲ್ಲಿದ್ದರು. ಅವರೊಂದಿಗೆ ಇಷ್ಟರ ವರೆಗೆ ಸೇರಿಲ್ಲದ ಅವರ ಪೈಕಿಯ ಇನ್ನೊಂದು ಜನತೆಯಲ್ಲೂ. ಅವನು ಪ್ರತಾಪಶಾಲಿಯೂ ವಿವೇಕವಂತನೂ ಆಗಿದ್ದಾನೆ.

ಅಹ್ಮದಿಯಾ ಜಮಾಅತಿನಲ್ಲಿ ಮಾರ್ಚ್ 23 ರಂದು ಯೌಮೇ ಮಸೀಹ್ ಮೌಊದ್ ಆಚರಿಸಲಾಗುತ್ತದೆ. ಅಲ್ಲಾಹನ ವಾಗ್ದಾನ ಪ್ರಕಾರ, ಮತ್ತು ಹಝ್ರತ್ ಪೈಗಂಬರ್(ಸ)ರ ಭವಿಷ್ಯವಾಣಿ ಪ್ರಕಾರ ಆಗತರಾದ, ಕಾಲಘಟ್ಟದ ಮಸೀಹ್ ಮೌಊದ್ ಮತ್ತು ಮಹ್‌ದಿಯನ್ನು ನಂಬಲು ನಮಗೆ ಅಲ್ಲಾಹನು ತೌಫೀಕ್ ನೀಡಿರುವನು ಎಂಬುವುದು ನಮ್ಮ ಸೌಭಾಗ್ಯವಾಗಿದೆ. 1889, ಮಾರ್ಚ್ 23ರಂದು ಹಝ್ರತ್ ಮಸೀಹ್ ಮೌಊದ್(ಅ) ಲುಧಿಯಾನದಲ್ಲಿ ಬೈಅತ್ತನ್ನು ಪಡೆದುಕೊಂಡು ನಿಷ್ಠಾವಂತರ ಜಮಾಅತನ್ನು ಸ್ಥಾಪಿಸಿದರು. ನಾನು ಪಠಿಸಿದ ಸೂರಃ ಜುಮಾದ ವಚನದಲ್ಲಿ ಹಝ್ರತ್ ಪೈಗಂಬರ್(ಸ)ರ ಸತ್ಯಸಂಧ ದಾಸನ ಆಗಮನ ಮತ್ತು ಅವರ ಮೂಲಕ ಒಂದು ಜಮಾಅತಿನ ಸ್ಥಾಪನೆಯ ಸುವಾರ್ತೆಯನ್ನು ನೀಡಲಾಗಿದೆ. ಇದಲ್ಲದೇ ಇತರ ವಚನಗಳಲ್ಲೂ ಮತ್ತು ಹದೀಸುಗಳಲ್ಲೂ ಈ ಸುವಾರ್ತೆ ಇದೆ. ಈಗ ನಾನು ಈ ವಚನಗಳ ವ್ಯಾಖ್ಯಾನ ಮತ್ತು ಮಸೀಹ್ ಮೌಊದ್‌ರ ಕಾಲಘಟ್ಟದ ಬಗ್ಗೆ ಹೇಳಲಾದ ಅನೇಕ ಕುರುಹುಗಳ ವಿವರಣೆಯನ್ನು ಹಝ್ರತ್ ಮಸೀಹ್ ಮೌಊದ್(ಅ)ರ ಮಾತುಗಳಲ್ಲಿ ವಿವರಿಸುವೆನು. ಅದೇ ರೀತಿಯಲ್ಲಿ ಹಝ್ರತ್ ಮಸೀಹ್ ಮೌಊದ್(ಅ)ರ ವಾದವನ್ನು ಸಹ ಸಂಕ್ಷೇಪವಾಗಿ ಅವರ ಮಾತುಗಳಲ್ಲಿ ಮುಂದಿರಿಸುತ್ತೇನೆ.

ಈ ವಚನಗಳನ್ನು ವ್ಯಾಖ್ಯಾನಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಈ ವಚನದ ಸಾರಾಂಶವೇನೆಂದರೆ, ಜನರಲ್ಲಿ ಅರಿವು ಮತ್ತು ವಿವೇಕ ಇಲ್ಲವಾದಂತಹ ಕಾಲದಲ್ಲಿ ಸಂದೇಶವಾಹಕರನ್ನು ನಿಯುಕ್ತಿಗೊಳಿಸಿದವನು ಅಲ್ಲಾಹನೇ. ಜೀವನ ಪರಿಪೂರ್ಣವಾಗುವಂತಹ ಮತ್ತು ಮನುಷ್ಯನ ಆತ್ಮವನ್ನು ಉನ್ನತಿಗೆ ತಲುಪಿಸುವಂತಹ ಧರ್ಮದ ಯುಕ್ತಿಯ ಬಗೆಗಿನ ಜ್ಞಾನಗಳು ಪೂರ್ಣವಾಗಿಯೂ ಕಾಣೆಯಾಗಿದ್ದುವು. ಅಂತಹ ಸಮಯದಲ್ಲಿ ಅಲ್ಲಾಹನು ತನ್ನ ಉಮ್ಮಿ ರಸೂಲನ್ನು ಕಳುಹಿಸಿದನು. ಆ ಪ್ರವಾದಿ ಆ ಜನರ ಆತ್ಮಗಳನ್ನು ಪರಿಶುದ್ಧಗೊಳಿಸಿದರು ಹಾಗೂ ಗ್ರಂಥದ ಅರಿವು ಮತ್ತು ಜ್ಞಾನದಿಂದ ಅವರನ್ನು ತುಂಬಿಸಿದರು. ಎಂದರೆ ಕುರುಹುಗಳು ಮತ್ತು ದೃಷ್ಟಾಂತಗಳ ಮೂಲಕ ಪರಿಪೂರ್ಣ ದೃಢವಿಶ್ವಾಸದ ಮಟ್ಟಕ್ಕೆ ಅವರನ್ನು ತಲುಪಿಸಿದರು. ಕೊನೆಯ ಕಾಲಘಟ್ಟದಲ್ಲಿ ಪ್ರಕಟಗೊಳ್ಳುವ ಮತ್ತೊಂದು ಜನತೆಯು ಇದೆ. ಅವರು ಕೂಡ ಆರಂಭದಲ್ಲಿ ಅಂಧಕಾರ ಮತ್ತು ದುರ್ಮಾರ್ಗದಲ್ಲಿ ಇರುವರು. ಆಗ ಅಲ್ಲಾಹನು ಅವರನ್ನು ಕೂಡ ಸಹಾಬಿಯರ ಹಾಗೆ ಮಾಡುವನು. ಅವರ ಸತ್ಯಸಂಧತೆ ಮತ್ತು ದೃಢವಿಶ್ವಾಸ ಕೂಡ ಸಹಾಬಿಯರ ಸತ್ಯಸಂಧತೆ ಮತ್ತು ದೃಢವಿಶ್ವಾಸದ ಹಾಗೆ ಆಗುವುದು. ಹಝ್ರತ್ ಪೈಗಂಬರ್(ಸ) ಇದನ್ನು ಹೇಳುವಾಗ ಸಲ್ಮಾನ್ ಫಾರಸಿಯ ಹೆಗಲ ಮೇಲೆ ಕೈಯಿಟ್ಟರು ಎಂದು ಪ್ರಬಲವಾದ ಹದೀಸಿನಲ್ಲಿ ಉಲ್ಲೇಖಿಸಲಾಗಿದೆ. ಹಝ್ರತ್ ಪೈಗಂಬರ್(ಸ) ಹೇಳಿದರು: **ಲೌ ಕಾನಲ್ ಈಮಾನು ಮುಅಲ್ಲಖನ್ ಬಿಸ್ಸುರಯ್ಯಾ ಲನಾಲುಹು ರಜುಲುನ್ ಮಿನ್ ಫಾರಿಸ್**. ಪವಿತ್ರ ಖುರ್‌ಆನ್ ಆಕಾಶಕ್ಕೆ ಎತ್ತಲ್ಪಡುವುದು ಎಂದು ಈ ಕಾಲಘಟ್ಟದ ಬಗ್ಗೆ ಹೇಳಲಾಗಿದೆ. ಇದೇ ಮಸೀಹ್ ಮೌಊದ್‌ರ ಕಾಲಘಟ್ಟವಾಗಿದೆ. ಮಸೀಹ್ ಮೌಊದ್ ಎಂದು ಕರೆಯಲ್ಪಡುವ ವ್ಯಕ್ತಿಯೇ ಫಾರಸಿ ವಂಶದ ಆ ವ್ಯಕ್ತಿಯಾಗಿರುವರು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಈ ವಚನದ ಅರ್ಥವೇನೆಂದರೆ, ಸಂಪೂರ್ಣ ದುರ್ಮಾರ್ಗದ ನಂತರ ಸನ್ಮಾರ್ಗ ಮತ್ತು ಯುಕ್ತಿ ಜ್ಞಾನವನ್ನು ಗಳಿಸುವ ಹಾಗೂ ಹಝ್ರತ್ ಪೈಗಂಬರ್(ಸ)ರ ದೃಷ್ಟಾಂತಗಳನ್ನು ಮತ್ತು ಅನುಗ್ರಹಗಳನ್ನು ಕಣ್ಣಾರೆ ಕಾಣುವ ಜನತೆ ಎರಡೇ ಆಗಿರುವರು. ಮೊದಲನೆಯದು ಸಹಾಬಿಯರದ್ದು ಮತ್ತು ಎರಡನೆಯದು ಸಹಾಬಿಯರಂತಹ ಮತ್ತೊಂದು ಜನತೆ. ಅದು ಮಸೀಹ್ ಮೌಊದ್‌ರ ಸಂಘವಾಗಿದೆ. ಏಕೆಂದರೆ, ಆ ಜನತೆ ಸಹ ಹಝ್ರತ್ ಪೈಗಂಬರ್(ಸ)ರ ದೃಷ್ಟಾಂತಗಳನ್ನು ನೋಡುವವರಾಗಿರುತ್ತಾರೆ. ಈಗ ಹಾಗೆಯೇ ಆಗಿದೆ. ಸಾವಿರದ ಮುನ್ನೂರು ವರ್ಷಗಳ ನಂತರ ಹಝ್ರತ್ ಪೈಗಂಬರ್(ಸ)ರ ಅದ್ಭುತ ದೃಷ್ಟಾಂತಗಳ ಬಾಗಿಲು ತೆರೆದಿದೆ. **ದಾರುಖುತ್**ನಿಯ ಹದೀಸ್ ಮತ್ತು **ಫತಾವಾ ಇಬ್ನು ಹಜರ್** ಪ್ರಕಾರ ರಮಝಾನ್ ತಿಂಗಳಲ್ಲಿ ಚಂದ್ರಗ್ರಹಣ ಮತ್ತು ಸೂರ್ಯಗ್ರಹಣ ಆದದ್ದನ್ನು ಜನರು ಕಣ್ಣಾರೆ ಕಂಡರು. ಅದೇ ರೀತಿ ಮಸೀಹ್ ಮೌಊದ್‌ರ ಕಾಲದಲ್ಲಿ ಧುಸ್ಸಿನೀನ್ ನಕ್ಷತ್ರ ಹೊರಡುವುದು ಎಂದು ಹೇಳಲಾಗಿತ್ತು. ಅದು ಹೊರಡುವುದನ್ನು ಸಾವಿರಾರು ಜನರು ಕಂಡರು. ಅದೇ ರೀತಿಯಲ್ಲಿ ಜಾವಾದ ಬೆಂಕಿಯನ್ನು ಸಾವಿರಾರು ಜನರು ಕಂಡರು. ಅದೇ ರೀತಿಯಲ್ಲಿ ಪ್ಲೇಗಿನ ಹರಡುವಿಕೆ ಮತ್ತು ಹಜ್ಜ್ ಕರ್ಮಾನುಷ್ಠಾನದಿಂದ ತಡೆಯಲ್ಪಡುವುದನ್ನು ಕೂಡ ಎಲ್ಲರೂ

ಕಣ್ಣಾರೆ ಕಂಡರು. ದೇಶದಲ್ಲಿ ರೈಲು ತಯಾರಾಗುವುದು ಮತ್ತು ಒಂಟೆಗಳು ಪ್ರಯೋಜನರಹಿತವಾಗುವುದು ಇವೆಲ್ಲವೂ ಹಝ್ರತ್ ಪೈಗಂಬರ್[ಸ]ರ ದೃಷ್ಟಾಂತಗಳಾಗಿದ್ದುವು. ಅವುಗಳನ್ನು ಸಹಾಬಿಯರು ದೃಷ್ಟಾಂತಗಳನ್ನು ಕಂಡ ಹಾಗೆಯೇ ಈ ಕಾಲದಲ್ಲಿ ಕಾಣಲಾಯಿತು. ಇದೇ ಕಾರಣದಿಂದ ಪ್ರತಾಪವಂತನಾದ ಅಲ್ಲಾಹನು ಈ ಕೊನೆಯ ಜನತೆಯನ್ನು **ಮಿನ್‌ಹುಂ** ಎಂಬ ಪದದಿಂದ ಕರೆದನು. ದೃಷ್ಟಾಂತಗಳನ್ನು ನೋಡುವುದರಲ್ಲಿ ಇವರು ಕೂಡ ಸಹಾಬಿಯರ ಹಾಗೆ ಆಗಿರುವರು ಎಂಬುವುದನ್ನು ಸೂಚಿಸಲಿಕ್ಕೆ ಹೀಗೆ ಕರೆಯಲಾಗಿತ್ತು. ಯೋಚಿಸಿ ನೋಡಿರಿ, ಸಾವಿರದ ಮುನ್ನೂರು ವರ್ಷಗಳಲ್ಲಿ ಪ್ರವಾದಿತ್ವ ಮಾರ್ಗದ ಇಂತಹ ಕಾಲಘಟ್ಟ ಯಾರಿಗೆ ಲಭಿಸಿದೆ?

ನಮ್ಮ ಜಮಾಅತಿಗೆ ಅನೇಕ ಕಾರಣಗಳಿಂದ ಸಹಾಬಿಯರ ಜಮಾಅತಿನೊಂದಿಗೆ ಹೋಲಿಕೆಯಿದೆ. ಸಹಾಬಿಯರು ಗಳಿಸಿದ ಹಾಗೆಯೇ ಅವರು ಸಹ ಅಲ್ಲಾಹನ ದೃಷ್ಟಾಂತಗಳಿಂದ ಹಾಗೂ ತಾಜಾ ದೈವಿಕ ಸಹಾಯಗಳಿಂದ ಪ್ರಕಾಶ ಮತ್ತು ದೃಢವಿಶ್ವಾಸವನ್ನು ಗಳಿಸುತ್ತಾರೆ. ಸಹಾಬಿಯರು ಸಹಿಸಿದ ಹಾಗೆಯೇ ಅವರು ಸಹ ಅಲ್ಲಾಹನ ಮಾರ್ಗದಲ್ಲಿ ಜನರ ಚುಚ್ಚುಮಾತು, ಶಾಪ ಹಾಕುವಿಕೆ, ಅಪಹಾಸ್ಯ, ಗೇಲಿ ಮಾತು, ಬೈಗುಳ ಹಾಗೂ ಸಂಬಂಧ ವಿಚ್ಛೇದದ ದುಃಖವನ್ನು ಸಹಿಸುತ್ತಿದ್ದಾರೆ. ಸಹಾಬಿಯರು ಗಳಿಸಿದ ಹಾಗೆಯೇ ಅವರು ಅಲ್ಲಾಹನ ದೃಷ್ಟಾಂತಗಳು ಮತ್ತು ದೈವಿಕ ಸಹಾಯದಿಂದ ಪರಿಶುದ್ಧ ಜೀವನವನ್ನು ಗಳಿಸುತ್ತಿದ್ದಾರೆ. ಸಹಾಬಿಯರು ಅಳುತ್ತಿದ್ದ ಹಾಗೆಯೇ ಅವರಲ್ಲಿ ಅನೇಕರು ನಮಾಝಿನಲ್ಲಿ ಅಳುತ್ತಾರೆ ಮತ್ತು ಸಜದದ ಸ್ಥಳಗಳನ್ನು ಕಣ್ಣೀರಿನಿಂದ ಒದ್ದೆ ಮಾಡುತ್ತಾರೆ. ಸಹಾಬಿಯರ ಹಾಗೆಯೇ ಅವರಲ್ಲಿ ಅನೇಕರು ದಿವ್ಯವಾಣಿಗಳನ್ನು ಪಡೆಯುತ್ತಾರೆ. ಈ ಜಮಾಅತ್ ಸಹಾಬಿಯರಿಗೆ ಸಮಾನವಾಗಿರುವ ಹಾಗೆಯೇ ಈ ಜಮಾಅತಿನ ಇಮಾಂ ಹಝ್ರತ್ ಪೈಗಂಬರ್[ಸ]ರೊಂದಿಗೆ ಹೋಲಿಕೆಯನ್ನು ಹೊಂದಿರುವರು. ಮಹ್‌ದಿಯ ಗುಣಗಳು ಹಝ್ರತ್ ಪೈಗಂಬರ್[ಸ]ರ ಗುಣಗಳಿಗೆ ಸಮಾನತೆ ಹೊಂದಿರುವುವು ಎಂದು ಹಝ್ರತ್ ಪೈಗಂಬರ್[ಸ] ಸ್ವತಃ ಹೇಳಿದ್ದರು. ಎರಡು ಸಮಾನತೆಗಳು ಅವರಲ್ಲಿ ಇರುವುವು. ಒಂದು ಸಮಾನತೆಯು ಹಝ್ರತ್ ಮಸೀಹ್‌ರೊಂದಿಗೆ ಆಗಿರುವುದು. ಅದರ ಕಾರಣದಿಂದ ಅವರು ಮಸೀಹ್ ಎಂದು ಕರೆಯಲ್ಪಡುವರು. ಎರಡನೇ ಸಮಾನತೆಯು ಹಝ್ರತ್ ಪೈಗಂಬರ್[ಸ]ರೊಂದಿಗೆ ಆಗಿರುವುದು. ಅದರ ಕಾರಣದಿಂದ ಅವರು ಮಹ್‌ದಿ ಎಂದು ಕರೆಯಲ್ಪಡುವರು.

ತನ್ನ ವಾದದ ಬಗ್ಗೆ ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಕಾಲಘಟ್ಟದ ಈಗಿನ ಸ್ಥಿತಿಯನ್ನು ನೋಡಿಕೊಂಡು ಹಾಗೂ ಈ ಕಾಲಘಟ್ಟವನ್ನು ವಿವಿಧ ಪಾಪಗಳಿಂದ ತುಂಬಿದ್ದಾಗಿ ನೋಡಿಕೊಂಡು ಅಲ್ಲಾಹನು ನನ್ನನ್ನು ಸತ್ಯದ ಪ್ರಚಾರ ಮತ್ತು ಸುಧಾರಣೆಗಾಗಿ ಕಳುಹಿಸಿದನು. ಇದು ಹಿಜರೀ ಹದಿಮೂರನೇ ಶತಮಾನವನ್ನು ಕೊನೆಗೊಳಿಸಿ ಹದಿನಾಲ್ಕನೇ ಶತಮಾನಕ್ಕೆ ಜನರು ಕಾಲಿಟ್ಟ ಕಾಲವಾಗಿದೆ. ಭೂಮಿಯಿಂದ ಹೊರಟುಹೋಗಿದ್ದ ಸತ್ಯವಿಶ್ವಾಸವನ್ನು ಪುನಃ ಸ್ಥಾಪಿಸಲಿಕ್ಕಾಗಿ ಈ ಶತಮಾನದ ಆರಂಭದಲ್ಲಿ ಧರ್ಮ ಸುಧಾರಣೆಗಾಗಿ ಆಗಮಿಸಬೇಕಾಗಿದ್ದ ವ್ಯಕ್ತಿ ನಾನೇ ಆಗಿದ್ದೇನೆ ಎಂದು ಆಗ ನಾನು ಆ ಆದೇಶವನ್ನು ಪಾಲಿಸುತ್ತಾ ಸಾಮಾನ್ಯ ಜನರ ನಡುವೆ ಪತ್ರಗಳು, ಪ್ರಕಟಣೆಗಳು ಮತ್ತು ಭಾಷಣಗಳ ಮೂಲಕ ಘೋಷಿಸಲು ಶುರುಮಾಡಿದೆ.

ಆಗಮಿಸಬೇಕಾಗಿದ್ದ ಮಸೀಹ್ ತಾನೇ ಆಗಿರುವೆನು ಎಂಬುವುದಕ್ಕೆ ಪುರಾವೆ ನೀಡುತ್ತಾ ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಅದಕ್ಕಿರುವ ಉತ್ತರವೇನೆಂದರೆ, ಯಾವ ಕಾಲದಲ್ಲಿ, ಯಾವ ದೇಶದಲ್ಲಿ, ಯಾವ ಗ್ರಾಮದಲ್ಲಿ ಮಸೀಹ್ ಮೌಊದ್ ಆಗಮಿಸಬೇಕು ಎಂಬುವುದು ಪವಿತ್ರ ಖುರ್‌ಆನ್ ಮತ್ತು ಹದೀಸುಗಳಿಂದ ಸಾಬೀತಾಗುವುದೋ ಯಾವ ವಿಶೇಷ ಕಾರ್ಯಗಳನ್ನು ಮಾಡುವುದು ಮಸೀಹ್‌ರ ಪರಮ ಉದ್ದೇಶವಾಗಿದೆಯೋ, ಯಾವ ಆಕಾಶೀಯ ಮತ್ತು ಭೌಮಿಕವಾದ ಘಟನೆಗಳನ್ನು ಮಸೀಹ್ ಮೌಊದ್‌ರ ಆಗಮನದ ಲಕ್ಷಣಗಳೆಂದು ಹೇಳಲಾಗಿದೆಯೋ, ಯಾವ ಅರಿವು ಮತ್ತು ಜ್ಞಾನಗಳನ್ನು ಮಸೀಹ್ ಮೌಊದ್‌ರ ವಿಶೇಷತೆಯೆಂದು ಹೇಳಲಾಗಿದೆಯೋ ಅವೆಲ್ಲವನ್ನೂ ಅಲ್ಲಾಹನು ನನ್ನಲ್ಲಿ, ನನ್ನ ಕಾಲದಲ್ಲಿ ಮತ್ತು ನನ್ನ ದೇಶದಲ್ಲಿ ಒಟ್ಟು ಸೇರಿಸಿದ್ದಾನೆ.

ಜಮಾಅತಿನ ಪ್ರಗತಿಯ ಕುರಿತು ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಈ ಜಮಾಅತನ್ನು ಅಳಿಸಿ ಹಾಕಲು ಜನರು ಪ್ರಯತ್ನಿಸುವರು, ಎಲ್ಲ ರೀತಿಯ ಕುತಂತ್ರಗಳನ್ನು ಪ್ರಯೋಗಿಸುವರು; ಆದರೆ ಅಲ್ಲಾಹನು ಈ ಜಮಾಅತ್ತನ್ನು ಯಾವಾಗಲೂ ಸಹಾಯ ಮಾಡುವನು ಎಂಬ ದಿವ್ಯವಾಣಿಯನ್ನು ಇಂದಿನಿಂದ 23 ವರ್ಷಗಳ ಹಿಂದೆ ಬರಾಹೀನೆ ಅಹ್ಮದಿಯಾದಲ್ಲಿ ಬರೆಯಲಾಗಿತ್ತು. (ಹುಝೂರ್ ಹೇಳಿದರು:) ಇಂದು ಸಹ ದೈವಿಕ ಸಹಾಯದ ಪರಂಪರೆ ಮುಂದುವರೆಯುತ್ತಿದೆ.

ವಾಕ್ಚಾತುರ್ಯದ ಮತ್ತು ಭಾಷಾ ಶ್ರೇಷ್ಠತೆಯ ಕಾರಂಜಿ ನಿನ್ನ ತುಟಿಗಳಿಂದ ಜಾರಿಯಾಗುವುದು ಎಂದು ಅಲ್ಲಾಹನು ಮಸೀಹ್ ಮೌಊದ್[ಅ]ರೊಡನೆ ಬರಾಹೀನೆ ಅಹ್ಮದಿಯಾದಲ್ಲಿ ಹೇಳಿದ್ದನು. ಈ ದೃಷ್ಟಾಂತದ ಪುರಾವೆ ಹಝ್ರತ್ ಮಸೀಹ್ ಮೌಊದ್[ಅ]ರ ಗ್ರಂಥಗಳಾಗಿವೆ. ಅನೇಕ ಗ್ರಂಥಗಳನ್ನು ಸ್ಪಷ್ಟವಾದ ಅರಬಿ ಭಾಷೆಯಲ್ಲಿ ಬರೆದು, (ಅದಕ್ಕೆ ಸಮಾನವಾದ ಗ್ರಂಥವನ್ನು ಬರೆಯುವವರಿಗೆ) ಸಾವಿರಾರು ರೂಪಾಯಿಗಳ ಬಹುಮಾನಗಳನ್ನು ಕೊಡುವುದಾಗಿ ಹೇಳಿಕೊಂಡು ಪ್ರಕಟಿಸಲಾಯಿತು. ಆದರೆ ಯಾರು ಅದನ್ನು ಎದುರಿಸಲು ಮುಂದೆ ಬರಲಿಲ್ಲ.

(ದುಆ ಸ್ವೀಕಾರದ ದೃಷ್ಟಾಂತಗಳಿಗೆ ಸಂಬಂಧಿಸಿ ಹೈದರಾಬಾದಿನ ಒಬ್ಬ ವಿದ್ಯಾರ್ಥಿಯಾದ ಅಬ್ದುಲ್‌ಕರೀಮಿನ ಉದಾಹರಣೆಯನ್ನು ಹುಝೂರ್ ಮುಂದಿರಿಸಿದರು. ಹುಝೂರ್ ಹೇಳಿದರು:) ಅವರು ಕಲಿಯಲಿಕ್ಕಾಗಿ ಖಾದಿಯಾನಿಗೆ ಬಂದಿದ್ದರು. ಅವರನ್ನು ಹುಚ್ಚುನಾಯಿ ಕಚ್ಚಿತ್ತು. ಸಾಧ್ಯವಾದ ಎಲ್ಲ ಚಿಕಿತ್ಸೆಯ ಪ್ರಯತ್ನದ ನಂತರ ವೈದ್ಯರು ಕೈಬಿಟ್ಟರು. ಅಂತಹ ಸ್ಥಿತಿಯಲ್ಲಿ ಹಝ್ರತ್ ಮಸೀಹ್ ಮೌಊದ್[ಅ] ಅಲ್ಲಾಹನಲ್ಲಿ ಅತ್ಯಂತ ನೋವಿನಿಂದ ದುಆ ಮಾಡಿದರು. ಆ ಸಂದರ್ಭದಲ್ಲಿ ದುಆ ಸ್ವೀಕಾರಗೊಳ್ಳುವಂತಹ ವಿಶಿಷ್ಟ ಅವಸ್ಥೆ ಕೂಡ ಉಂಟಾಯಿತು. ಹೀಗೆ ಸ್ವಲ್ಪ ಸಮಯದಲ್ಲೇ ಆ ವಿದ್ಯಾರ್ಥಿಯ ಆರೋಗ್ಯ ಉತ್ತಮಗೊಳ್ಳಲು ಆರಂಭವಾಯಿತು. ಕೆಲವೇ ದಿನಗಳಲ್ಲಿ ಪೂರ್ಣವಾಗಿ ಅವರು ಗುಣಮುಖವಾದರು.

(ದೈವಿಕ ದೃಷ್ಟಾಂತಗಳ ಪ್ರಸ್ತಾಪದಲ್ಲಿ ಡಾಕ್ಟರ್ ಅಲಕ್ಸಾಂಡರ್ ಡೋಯಿ, ಗುಲಾಂ ದಸ್ತಗೀರ್ ಖಸೂರಿ ಮತ್ತು ಚಿರಾಗ್ ದೀನ್ ಜಮೂನಿಯ ಉದಾಹರಣೆಗಳನ್ನು ಹುಝೂರ್ ಮುಂದಿರಿಸಿದರು.)

(ಹುಝೂರ್ ಹೇಳಿದರು:) ಆಗಮಿಸಬೇಕಾಗಿದ್ದ ಮಸೀಹ್ ಮತ್ತು ಮಹ್‌ದಿ ಆಗಮಿಸಿರುವರು, ಹಝ್ರತ್ ಪೈಗಂಬರ್[ಸ]ರ ಸತ್ಯಸಂಧ ದಾಸ ಇವರೇ ಆಗಿರುವರು ಹಾಗೂ ಅವರನ್ನು ಬೈಅತ್ ಮಾಡುವುದು ಹಝ್ರತ್ ಪೈಗಂಬರ್[ಸ]ರ ಆದೇಶದ ಕಾರಣದಿಂದ ಅಗತ್ಯವಾಗಿದೆ ಎಂಬ ಸತ್ಯವನ್ನು ಇಂದು ಮುಸ್ಲಿಮರು ಮನವರಿಕೆ ಮಾಡಿದರೆ ಮುಸ್ಲಿಮರು ಲೋಕದಲ್ಲಿ ತಮ್ಮ ಶ್ರೇಷ್ಠತೆಯನ್ನು ಪುನಃ ಗಳಿಸುವರು. ಇಲ್ಲದಿದ್ದರೆ ಈಗ ಇರುವ ಸ್ಥಿತಿಯಲ್ಲೇ ಇರುವರು.

(ಹುಝೂರ್ ಹೇಳಿದರು:) ರಮಝಾನ್ ಮಾಸದಲ್ಲಿ ಅಹ್ಮದಿಯರು ತಮಗಾಗಿ ಮತ್ತು ಎಲ್ಲ ವಿಧದ ಪಿತೂರಿಗಳಿಂದ ಜಮಾಅತ್ ಸುರಕ್ಷಿತವಾಗಿರಲು ದುಆ ಮಾಡುವುದರೊಂದಿಗೆ ಮುಸ್ಲಿಂ ಸಮುದಾಯಕ್ಕಾಗಿಯೂ ದುಆ ಮಾಡಬೇಕು. ಅಲ್ಲಾಹನು ಅವರ ಕಣ್ಣುಗಳನ್ನು ತೆರೆಯಲಿ, ಅವರನ್ನು ಅಂಧಕಾರದಿಂದ ಹೊರಗೆ ತರಲಿ, ಖ಼ತಮುನ್ನುಬುವ್ವತನ್ನು ಸರಿಯಾಗಿ ಮನವರಿಕೆ ಮಾಡಿರುವವರು ಹಝ್ರತ್ ಮಿರ್ಝಾ ಗ಼ುಲಾಂ ಅಹ್ಮದ್ ಖಾದಿಯಾನಿ ಮಸೀಹ್ ಮೌಊದ್ ಮತ್ತು ಮಹ್‌ದಿ[ಅ] ಮತ್ತು ಅವರ ಜಮಾಅತಿನವರೇ ಆಗಿರುವರು ಎಂಬ ಸಂಗತಿಯನ್ನು ಅವರು ಅರಿಯುವಂತಾಗಲಿ.

ಪಾಕಿಸ್ತಾನದ ಅಹ್ಮದಿಯರು ವಿಶೇಷವಾಗಿ ತಮ್ಮ ದೇಶಕ್ಕಾಗಿ ದುಆ ಮಾಡಬೇಕು ಮತ್ತು ಪಾಕಿಸ್ತಾನದ ಅಹ್ಮದಿಯರಿಗಾಗಿಯೂ ದುಆ ಮಾಡಬೇಕು. ಪಿತೂರಿಗಾರರಿಂದ ದುಷ್ಟರಿಂದ ಮತ್ತು ಸ್ವಾರ್ಥ ನಾಯಕರಿಂದ ದೇಶವನ್ನು ಅಲ್ಲಾಹನು ಸಂರಕ್ಷಿಸಲಿ. ಅದೇ ರೀತಿಯಲ್ಲಿ ಬುರ್ಕಿನಾಫಾಸೋದ ಅಹ್ಮದಿಯರಿಗಾಗಿಯೂ ದುಆ ಮಾಡಿರಿ. ಅಲ್ಲಾಹನು ಅವರನ್ನು ಎಲ್ಲ ಕೆಡುಕುಗಳಿಂದ ಸಂರಕ್ಷಿಸಲಿ. ಬಾಂಗ್ಲಾದೇಶದ ಅಹ್ಮದಿಯರನ್ನು ವಿಶೇಷವಾಗಿ ದುಆಗಳಲ್ಲಿ ನೆನಪಿಡಿರಿ. ಅಲ್ಲೂ ಪ್ರತಿ ಶುಕ್ರವಾರ ಏನಾದರೂ ಅಪಾಯ ಸಾಧ್ಯತೆಗಳು ಇರುತ್ತವೆ.

ಲೋಕದ ಅಹ್ಮದಿಯರಿಗಾಗಿಯೂ ದುಆ ಮಾಡಿರಿ. ಅಲ್ಲಾಹನು ಪ್ರತಿಯೊಂದು ಕೆಡುಕುಗಳಿಂದ ಪ್ರತಿಯೊಬ್ಬ ಅಹ್ಮದಿಯನ್ನು ಸುರಕ್ಷಿತಗೊಳಿಸಲಿ. ಪ್ರತಿಯೊಬ್ಬ ಅಹ್ಮದಿಗೆ ಸ್ಥಿರಚಿತ್ತತೆಯನ್ನು ನೀಡಲಿ. ಅವರ ನಂಬಿಕೆ ಮತ್ತು ದೃಢವಿಶ್ವಾಸವನ್ನು ವರ್ಧಿಸಲಿ.

ಲೋಕವು ನಾಶದಿಂದ ರಕ್ಷಣೆ ಪಡೆಯಲು ಕೂಡ ದುಆ ಮಾಡಿರಿ. ಇಂದಿನ ಸ್ಥಿತಿಯಲ್ಲಿ ಲೋಕವು ಬೆಂಕಿಯ ಅಂಚಿನಲ್ಲಿ ನಿಂತಿದೆ. ಬಾಹ್ಯವಾದ ಯುದ್ಧಗಳ ಕಡೆಗೂ ಧಾವಿಸುತ್ತಿದೆ. ಈ ಕಾರಣದಿಂದಲೂ ವಿನಾಶ ಉಂಟಾಗುವುದು. ಸ್ವಭಾವಪರವಾದ ಕೆಡುಕುಗಳು ಕೂಡ ಎಲ್ಲೆ ಮೀರಿವೆ. ಈ ಜನರು ಅಲ್ಲಾಹನನ್ನು ಬಿಟ್ಟು ಬಿಡುವುದರಿಂದ ಅಲ್ಲಾಹನ ಕೋಪವನ್ನು ವರ್ಧಿಸಲು ಕಾರಣಕರ್ತರಾಗದಿರಲಿ. ಅದರ ಕಾರಣದಿಂದ ಅಲ್ಲಾಹನ ಶಿಕ್ಷೆ ಅವರ ಮೇಲೆ ಇಳಿಯದಿರಲಿ.

ಅಲ್ಲಾಹನು ಅಹ್ಮದಿಯರನ್ನು ಎಲ್ಲ ಕೆಡುಕುಗಳಿಂದ ಸಂರಕ್ಷಿಸಲಿ. ಅಹ್ಮದಿಯರಿಗೆ ತಮ್ಮ ಕರ್ತವ್ಯ ಮತ್ತು ಹಕ್ಕನ್ನು ಈಡೇರಿಸಲು ಸೌಭಾಗ್ಯ ಲಭಿಸಲಿ. ಎಲ್ಲ ವಿಧದ ಆಪತ್ತುಗಳಿಂದ ರಕ್ಷಿಸುತ್ತಾ ತನ್ನ ಸಂರಕ್ಷಣೆ ಮತ್ತು ಅಭಯದಲ್ಲಿ ಇರಿಸಲಿ. ಆಮೀನ್.

ಅಲ್‌ಫಝ಼್ಲ್ ಇಂಟರ್‌ನ್ಯಾಶನಲ್ ವಾರ ಪತ್ರಿಕೆಯು ದಿನಪತ್ರಿಕೆಯಾದ ಬಗ್ಗೆ ಹುಝೂರ್ ಖುತ್ಬದ ಕೊನೆಯಲ್ಲಿ ಹೇಳಿದರು. ಅದನ್ನು ಓದಲು ಮತ್ತು ಖರೀದಿ ಮಾಡಲು ಹೇಳುವುದರೊಂದಿಗೆ ಅಲ್‌ಫಝ಼್ಲಿನಲ್ಲಿ ಬರೆಯುವವರಿಗಾಗಿ ಹುಝೂರ್ ದುಆ ಮಾಡಿದರು.

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِیَ لَهٗ ط وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُبِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوااللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis***[(atba)]

*At, **'Masjid Mubarak'**, Islamabad, Tilford, UK, on 24-03-2023*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email**: khutuba.kannada@gmail.com*

**You can find all the Sermons archived at**: www.alislam.org/friday-sermon